# ಈ ಲೇಖನದ ವಿಷಯಾನುಕ್ರಮಣಿಕೆ


**ಮಡಿಮೈಲಿಗೆ — 2** 2

**ದೇವರ ಪೂಜೆಯ ಮಡಿ** 2

**ಸ್ನಾನದ ನಿಯಮಗಳು** 3

**ಮಂತ್ರಗಳ ಜಪಕ್ಕೆ ಬೇಕಾದ ಮಡಿ** 8

**ಅಡಿಗೆ ಮತ್ತು ಭೋಜನದ ಮಡಿ** 8

**ಮಡಿಗೆ ಬರುವ ಬಟ್ಟೆಗಳು** 10

- ಹತ್ತಿಯ ಬಟ್ಟೆ 10
- ರೇಶಿಮೆಯ ವಸ್ತ್ರ 12
- ದಾಭಳಿ 13
- ನಾರು ಮಡಿ 14

**ಮಡಿಗೆ ಬಾರದ ಬಟ್ಟೆಗಳು** 14

- ಹರಿದಬಟ್ಟೆ 14
- ಅಂಚಿಲ್ಲದ ಬಟ್ಟೆ 15
- ಹೊಲಿದ ಬಟ್ಟೆ 16

**ಮಡಿಯ ಮಧ್ಯದಲ್ಲಿ ಮೈಲಿಗೆಯ ಕೆಲಸ ಬಂದಾಗ** 17

**ಸಂಗ್ರಹ** 21

## ಮಡಿಮೈಲಿಗೆ — 2

ಮೈಲಿಗೆಯ ಕುರಿತು ತಿಳಿದದ್ದಾಯಿತು. ಇನ್ನು ಮಡಿಯ ಕುರಿತು ತಿಳಿಯೋಣ.

### ದೇವರ ಪೂಜೆಯ ಮಡಿ

ದೇವರಪೂಜೆ ಎಂದರೆ ಸಾಲಿಗ್ರಾಮ, ಪ್ರತಿಮಗೆಳಲ್ಲಿರುವ ಭಗವಂತನನ್ನು, ದೇವತಾಸನ್ನಿಧಾನದ ಪ್ರತೀಕಗಳನ್ನು, ಗುರುಗಳ ವೃಂದಾವನಗಳನ್ನು ಪೂಜಿಸುವದು.

ಈ ಕಾರ್ಯಕ್ಕೆ ತಮಾಮ್ ಶುದ್ಧತೆ ಆವಶ್ಯಕ. ಕಂಡಕಂಡ ರೀತಿಯಲ್ಲಿ ಪೂಜೆಯನ್ನು ಮಾಡುವಂತಿಲ್ಲ. ಶಾಸ್ತ್ರದ ಆದೇಶದಂತೆಯೇ ಮಾಡಬೇಕು.

ಪರಿಶುದ್ಧ ಕ್ರಮದಲ್ಲಿ ತಲೆಸ್ನಾನ ಮಾಡಿದ ನಂತರ ಹಿಂದಿನ ದಿವಸ ಒಣಗಿಹಾಕಿದ, ಒಣ ಹಾಕಿದ ನಂತರ ಯಾರೂ ಮುಟ್ಟದ, ಶುದ್ಧ ಹತ್ತಿಯ ಬಟ್ಟೆಗಳನ್ನು ಉಟ್ಟು ಹೊದ್ದು ದೇವರ ಪೂಜೆಯನ್ನು ಮಾಡಬೇಕು.

## ಸ್ನಾನದ ನಿಯಮಗಳು

ಸ್ನಾನ ಎಂದರೆ ಮೈಮೇಲೆ ನೀರು ಸುರಿದುಕೊಳ್ಳುವದಲ್ಲ. ಮೊದಲಿಗೆ ಆಚಮನ ಮಾಡಿ, ಸಂಕಲ್ಪ ಮಾಡಿ, ಶ್ರೀಹರಿಯನ್ನು ಪ್ರಾರ್ಥನೆ ಮಾಡಿ, ಗಂಗಾದಿ ತೀರ್ಥಗಳನ್ನು ಸ್ಮರಿಸಿ, ಮಂತ್ರಗಳನ್ನು ಪಠಿಸಿ ಮಾಡುವದೇ ಸ್ನಾನ. ಇದರಿಂದಲೇ ಮನುಷ್ಯ ಮಡಿಯಾಗುವದು. ಕೇವಲ ಸ್ನಾನ ಮಾಡುವದರಿಂದ ಮಡಿಯಾಗುವದೇ ಇಲ್ಲ.

ಸ್ನಾನ ಮಾಡಬೇಕಾದರೆ ಅನುಸರಿಸಬೇಕಾದ ಕ್ರಿಯೆಗಳು ಮತ್ತು ಅನುಸಂಧಾನಗಳ ಕುರಿತು ಸದಾಚಾರಸ್ಮೃತಿಯ ಅನುವಾದದಲ್ಲಿ ವಿಸ್ತಾರವಾಗಿ ತಿಳಿಸುತ್ತೇನೆ.

ಇಲ್ಲಿ ಬಾಹ್ಯಶೌಚದ ಕುರಿತು — ಮುಖ್ಯವಾಗಿ ಮಾಡಬೇಕಾದ ಮತ್ತು ಮಾಡಬಾರದ ವಿಷಯಗಳ ಕುರಿತು — ಚರ್ಚಿಸುತ್ತೇನೆ.

೧. ಸ್ನಾನ ಮಾಡುವಾಗ ಬತ್ತಲೆಯಾಗಬಾರದು. ಬತ್ತಲೆಯಾಗಿ ಮಾಡಿದ ಸ್ನಾನದಿಂದ ಮನುಷ್ಯ ಮಡಿಯಾಗುವದಿಲ್ಲ.

೨. ಸ್ನಾನ ಮಾಡುವಾಗ ಎರಡು ಬಟ್ಟೆ ಇರಲೇ ಬೇಕು. ಉಟ್ಟ ಬಟ್ಟೆ, ಮೈ ವರೆಸಿಕೊಳ್ಳುವ ಬಟ್ಟೆ.

೩. ಮೈ ವರೆಸಿಕೊಳ್ಳುವ ಬಟ್ಟೆಯನ್ನೂ ತೋಯಿಸಿ ಸ್ನಾನ ಮಾಡಿ, ಆ ಬಟ್ಟೆಯನ್ನು ಹಿಂಡಿ ಅದರಿಂದಲೇ ಮೈ ವರೆಸಿಕೊಳ್ಳಬೇಕು. ಆಗ ಮಾತ್ರ ಪೂಜೆಯ ಮಡಿಗೆ ಅರ್ಹರಾಗುತ್ತೇವೆ. ಮೈಲಿಗೆಯ ಬಟ್ಟೆಯಿಂದ ವರೆಸಿಕೊಂಡರೆ ಪೂಜೆಯ ಮಡಿಗೆ ಅರ್ಹತೆ ದೊರೆಯುವದಿಲ್ಲ. ಮಡಿಯಲ್ಲಿಯೇ ವಸ್ತ್ರವನ್ನು ಒಣಗಿ ಹಾಕಿದ್ದರೆ, ಸ್ನಾನ ಮಾಡಿ, ಸ್ನಾನದ ಕಾಲದಲ್ಲಿಯೇ ಮಡಿಮಾಡಿಕೊಂಡ ಒದ್ದೆಯ ಉತ್ತರೀಯದಿಂದ ಒಮ್ಮೆ ವರೆಸಿಕೊಂಡು ಆ ಬಳಿಕ ಒಣಗಿದ ಮಡಿವಸ್ತ್ರವನ್ನು ತೆಗೆದುಕೊಂಡು, ಆ

ಒಣಗಿದ ವಸ್ತ್ರದಿಂದ ಪೂರ್ಣವಾಗಿ ಮೈ ವರೆಸಿಕೊಳ್ಳಬಹುದು. ವರೆಸಿಕೊಂಡ ತಕ್ಷಣ ನೀರಿನಲ್ಲಿ ಹನ್ನೆರಡು ಊರ್ಧ್ವಪುಂಢ್ರಗಳನ್ನು ಧರಿಸಬೇಕು. ಇಲ್ಲದಿದ್ದರೆ ಮಡಿವಸ್ತ್ರವನ್ನುಡುವ ಅರ್ಹತೆ ಒದಗುವದಿಲ್ಲ. ಕಾರಣ ಬಟ್ಟೆ ಉಡುವದೂ ಸಹ ದೇವರ ಸೇವೆ, ಸತ್ಕರ್ಮ. ಅದನ್ನು ಮಾಡಬೇಕಾದರೆ ಮೈಮೇಲೆ ಊರ್ಧ್ವಪುಂಢ್ರಗಳಿರಲೇ ಬೇಕು.

೪. ಸ್ನಾನ ಮಾಡಿದ ನಂತರ ಮೈಯಿಂದ ನೀರು ಸೋರಿಸಿಕೊಂಡು ನಡೆದು ಬರಬಾರದು.

೫. ಸ್ನಾನ ಮಾಡುವಾಗ, ಮಾಡಿದ ನಂತರ ಮಾತ್ರ ಒದ್ದೆಬಟ್ಟೆ. ಆ ನಂತರ ಮೊದಲೇ ಮಡಿಯಲ್ಲಿ ಒಣಗಿ ಹಾಕಿದ ವಸ್ತ್ರವನ್ನು ಉಟ್ಟರೆ ಮಾತ್ರ ಮಡಿ. ಒದ್ದೆಯ ವಸ್ತ್ರದಲ್ಲಿ ದೇವರ ಪೂಜೆ, ಊಟ ಮಾಡುವದರಿಂದ ಒಂದು ಪ್ರತ್ಯೇಕ ನರಕವಾಗುತ್ತದೆ ಎಂದು ಧರ್ಮಶಾಸ್ತ್ರದಲ್ಲಿದೆ. ಒದ್ದೆಯ ಬಟ್ಟೆಯನ್ನುಟ್ಟು ಮಾಡುವ ಸತ್ಕರ್ಮ ಒಂದೇ, ಅದು ನಮ್ಮ ತಂದೆತಾಯಿಯರ

ಅಪರಕರ್ಮ. ಒದ್ದೆಯುಟ್ಟು ಯಾವ ಸತ್ಕರ್ಮಗಳನ್ನೂ ಮಾಡುವಂತಿಲ್ಲ.

**ಹೌದು, ನೀವು ಒದ್ದೆಯುಟ್ಟು ಬಡಿಸುವವರನ್ನು, ಊಟ ಮಾಡುವವರನ್ನು ನೋಡಿರಬಹುದು. ಅದು ನಿಸ್ಸಂಶಯವಾಗಿ ಮೈಲಿಗೆ. ಒದ್ದೆ ಬಟ್ಟೆಯನ್ನುಟ್ಟು ಮಲಮೂತ್ರಗಳ ವಿಸರ್ಜನೆ ಸಹಿತ ಮಾಡುವ ಹಾಗಿಲ್ಲ, ಅಂದ ಮೇಲೆ ಒದ್ದೆ ಬಟ್ಟೆಯುಟ್ಟು ಪೂಜೆ ಮಾಡುವದು, ಬಡಿಸುವದು, ಊಟ ಮಾಡುವದು ನಿಶ್ಚಿತವಾಗಿ ತಪ್ಪು.**

ಗ್ರಹಣ ಮುಂತಾದ ಅತ್ಯಂತ ಅನಿವಾರ್ಯ ಪ್ರಸಂಗದಲ್ಲಿ ಒದ್ದೆಯ ಬಟ್ಟೆಯನ್ನು ಏಳು ಬಾರಿ ಚನ್ನಾಗಿ ಝಾಡಿಸಿ ಉಡುವ ಸಂಪ್ರದಾಯವಿದೆ. ಕಾರಣ, ಆಗ ಒಣ ಹಾಕಿದ ಮಡಿಯ ವಸ್ತ್ರ ದೊರೆಯಲು ಸಾಧ್ಯವಿಲ್ಲ. ಅದಕ್ಕಾಗಿ ಅತ್ಯಂತ ಅನಿವಾರ್ಯಪ್ರಸಂಗಗಳಲ್ಲಿ ಈ ನಿಯಮ. ಹೊರತು ಬೇರೆಯ ಪ್ರಸಂಗಗಳಲ್ಲಿ ಅಲ್ಲ, ಯಾವಾಗಲೂ ಅದನ್ನು ಪಾಲಿಸುವಂತಿಲ್ಲ.

೬. ಹೀಗೆ ವಿಷ್ಣುಸ್ಮರಣಪೂರ್ವಕವಾಗಿ, ಶುದ್ಧವಾದ ಕ್ರಮದಲ್ಲಿ ಸ್ನಾನ ಮಾಡಿ ಬಂದು, ಹಿಂದಿನ ದಿವಸ ಒಣ ಹಾಕಿದ ಬಟ್ಟೆಯನ್ನುಟ್ಟು, ಈಗ ಸ್ನಾನ ಮಾಡಬೇಕಾದರೆ ಉಟ್ಟಿದ್ದ ಬಟ್ಟೆಯನ್ನು ನಾಳೆಗಾಗಿ ಒಣ ಹಾಕಬೇಕು. ಮಡಿಯನ್ನು ಒಣ ಹಾಕಲು ಲೋಹದ ತಂತಿಯನ್ನೋ, ಸರಳನ್ನೋ, ಮರವನ್ನೋ ಬಳಸಬೇಕು. ದಾರದ ಮೇಲೆ ಬಟ್ಟೆಯನ್ನು ಒಣ ಹಾಕಬಾರದು.

ನೀರು, ಬಟ್ಟೆ, ಮುಂತಾದವು ಮಡಿಯಲ್ಲಿ ತಂದಿದ್ದರೆ ಮಾತ್ರ ಮಡಿ. ಮೈಲಿಗೆಯಲ್ಲಿ ಮುಟ್ಟಿದ್ದರೆ ಮೈಲಿಗೆ. ಹೀಗಾಗಿ, ಮಡಿಯಲ್ಲಿ ನಾವು ಪ್ರತ್ಯೇಕ ನೀರನ್ನು ತರಬೇಕು.

೭. ಶುದ್ಧ ಬಟ್ಟೆಯುಟ್ಟ ಬಳಿಕ ಆಚಮನ ಮಾಡಬೇಕು. ಆ ನಂತರ ಗೋಪೀಚಂದನ ಹಚ್ಚಿಕೊಂಡು, ಸಂಧ್ಯಾವಂದನೆ ಮಾಡಿ ಸಾಲಿಗ್ರಾಮಾದಿಗಳ ಪೂಜೆಯನ್ನು ಮಾಡಬೇಕು.

೮. ದೇವರ ಪೂಜೆ ಮಾಡುವಾಗ ಮಡಿಯಲ್ಲಿರುವ ಮತ್ತೊಬ್ಬರನ್ನು ಸಹ ಮುಟ್ಟಬಾರದು. ಅವರು

ಪದಾರ್ಥಗಳನ್ನು ನೆಲದ ಮೇಲಿಟ್ಟರೆ ಅವನ್ನು ತೆಗೆದುಕೊಳ್ಳಬೇಕು.

## ಮಂತ್ರಗಳ ಜಪಕ್ಕೆ ಬೇಕಾದ ಮಡಿ

ಮೇಲಿನ ದೇವರ ಪೂಜೆಯ ಮಡಿಯಲ್ಲಿಯೇ ಮಂತ್ರಗಳ ಜಪ ಮಾಡುವದು ಉತ್ತಮ ಪಕ್ಷ. ಅದು ಸಾಧ್ಯವಿಲ್ಲದೇ ಇದ್ದಾಗ ಮೇಲೆ ಹೇಳಿದಂತೆ ಸ್ನಾನ ಮಾಡಿ, ಶುದ್ಧ ರೇಶಿಮೆಯ ವಸ್ತ್ರವನ್ನುಟ್ಟು ಅಥವಾ ಶುದ್ಧವಾದ ಧಾವಳಿಯನ್ನುಟ್ಟು (ಈ ರೇಶಿಮೆಯ, ಧಾಬಳಿಯ ವಸ್ತ್ರವನ್ನು ಊಟ ಮಾಡುವಾಗ ಉಟ್ಟಿರಬಾರದು, ಜಪಕ್ಕಾಗಿಯೇ ಪ್ರತ್ಯೇಕ ತೆಗೆದಿಟ್ಟರಬೇಕು) ಉತ್ತರೀಯವನ್ನು ಹೊದ್ದು ಮಂತ್ರಗಳ ಜಪ, ವೇದ, ವಿಷ್ಣುಸಹಸ್ರನಾಮ, ವಾಯುಸ್ತುತಿಗಳ ಪಾರಾಯಣವನ್ನು ಮಾಡಬೇಕು. ಈ ಶುದ್ಧಿ ಇಲ್ಲದೇ ಇದ್ದರೆ ಇವನ್ನು ಜಪಿಸಬಾರದು.

## ಅಡಿಗೆ ಮತ್ತು ಭೋಜನದ ಮಡಿ

ದೇವರ ಪೂಜೆಯ ಮಡಿಯಲ್ಲಿಯೇ ಅಡಿಗೆಯಾಗಬೇಕು ಎನ್ನುವದು ಶಾಸ್ತ್ರಗಳ ನಿಲುವು. (ನೈವೇದ್ಯದ ಲೇಖನದಲ್ಲಿ ವಿವರಿಸುತ್ತೇನೆ)

ಸಾಧ್ಯವಿಲ್ಲದಿದ್ದಾಗ ಸ್ವಲ್ಪ ಸಂಕೋಚದೊಂದಿಗೆ ಅಡಿಗೆಯನ್ನು ಮಾಡಬೇಕು.

ಮೇಲೆ ಹೇಳಿದಂತೆ ಸ್ನಾನ ಮಾಡಿ, (ಸ್ತ್ರೀಯರು ಮಾತ್ರ ತಲೆ ಸ್ನಾನ ಮಾಡದಿದ್ದರೂ ಶುದ್ಧರಾಗುತ್ತಾರೆ. ಆದರೆ ಪುರುಷರು ತಲೆಸ್ನಾನ ಮಾಡದಿದ್ದರೆ ಶುದ್ಧರಾಗುವದಿಲ್ಲ. ಹೀಗಾಗಿ ಅವರು ಪ್ರತೀನಿತ್ಯ ತಲೆಸ್ನಾನ ಮಾಡಲೇಬೇಕು) ಶುದ್ಧವಾದ ಒಣಗಿದ ವಸ್ತ್ರಗಳನ್ನುಟ್ಟು ಅಡಿಗೆ ಮಾಡಬೇಕು. ಅದೇ ಮಡಿಯಲ್ಲಿ ಭೋಜನವನ್ನು ಮಾಡಬೇಕು.

ದೇವರ ಪೂಜೆಯ ಮಧ್ಯದಲ್ಲಿ, ಅಡಿಗೆ ಮಾಡುವಾಗ, ಮಲಮೂತ್ರ ವಿಸರ್ಜನೆ ಮಾಡುವ ಅನಿವಾರ್ಯತೆ ಒದಗಿದಾಗ ಮತ್ತೆ ಸ್ನಾನ ಮಾಡಿಯೇ ಮುಂದುವರೆಸಬೇಕು. ಮಲಮೂತ್ರಗಳನ್ನು ಬಲವಂತವಾಗಿ ತಡೆಹಿಡಿದು ಪೂಜೆ ಅಡಿಗೆ ಮಾಡುವದು ಅಪರಾಧ, ಪಾಪ ಎಂದು ಪರಿಗಣಿಸಲ್ಪಟ್ಟಿದೆ.

ಪ್ಲಾಸ್ಟಿಕ್ಕು ಸರ್ವಥಾ ಮಡಿಗೆ ಬರುವದಿಲ್ಲ. ಯಾವ ಮಡಿಯಲ್ಲಿಯೂ ಅದನ್ನು ಮುಟ್ಟಬಾರದು.

# ಮಡಿಗೆ ಬರುವ ಬಟ್ಟೆಗಳು

**ಕೌಪೀನ, ಮಡಿಪಂಚೆ, ಉಡುವ ಪಂಚೆ, ಹೊದಿಯುವ ಪಂಚೆ,ಸೀರೆ, ಕಂಚುಕಗಳು ಮಡಿಯ ಬಟ್ಟೆಗಳು.**

ಇವನ್ನು ಬಿಟ್ಟು ಯಾವುದೇ ರೀತಿಯ ಹೊಲಿದ ಬಟ್ಟೆಗಳು ಮಡಿಗೆ ಬರುವದಿಲ್ಲ.
ಪಂಚೆ ಸೀರೆಗಳನ್ನು ಕಚ್ಚೆ ಮಾಡಿ ಉಟ್ಟಾಗ ಮಾತ್ರ ಮಡಿ. ದಟ್ಟಿ ಉಟ್ಟರೆ ಮಡಿಯಲ್ಲ.

ಬ್ರಹ್ಮಚಾರಿ ಮತ್ತು ಸಂನ್ಯಾಸಿಗಳು ಕಚ್ಚೆ ಉಡುವಂತಿಲ್ಲವಾದ್ದರಿಂದ, ಕೌಪೀನ ಧರಿಸಿ ದಟ್ಟಿಯನ್ನುಡಬೇಕು.

## ಹತ್ತಿಯ ಬಟ್ಟೆ

ಹತ್ತಿಯ ಬಟ್ಟೆ ಸುಲಭಲಭ್ಯ ಮತ್ತು ನಿರಾಡಂಬರದ ಬಟ್ಟೆ. ಸ್ನಾನದ ಕಾಲದಲ್ಲಿ ಮಡಿ ಮಾಡಿಕೊಂಡು, ನಾವು ಮೈಲಿಗೆಯಲ್ಲಿದ್ದಾಗ ಮುಟ್ಟದಂತೆ ಒಣಗಿಸಬೇಕು. ಮಾರನೆಯ ದಿವಸ ಸ್ನಾನ ಮಾಡಿದ ನಂತರ ಉಟ್ಟು ದೇವರ ಪೂಜೆಯನ್ನು ಮಾಡಬೇಕು.

ಈ ಬಟ್ಟೆಯನ್ನುಟ್ಟಾಗ ಮತ್ತೊಬ್ಬ ಮೈಲಿಗೆಯವರು ನಮ್ಮನ್ನು ಮುಟ್ಟಿದಲ್ಲಿ, ಅಥವಾ ನಾವೇ ಮೈಲಿಗೆಯ ಪದಾರ್ಥಗಳನ್ನು ಮುಟ್ಟಿದಲ್ಲಿ, ಅಥವಾ ಮಲಮೂತ್ರ ವಿಸರ್ಜನೆ, ವಾಂತಿ, ನಿದ್ರೆ ಮುಂತಾದ ಮೈಲಿಗೆಯ ಕಾರ್ಯಗಳನ್ನು ಮಾಡಿದಲ್ಲಿ ನಾವು ಮೈಲಿಗೆಯಾಗುತ್ತೇವೆ. ಆ ಬಟ್ಟೆ ಮಡಿಗೆ ಬರುವದಿಲ್ಲ.

ಮಡಿಯಲ್ಲಿನ ಹತ್ತಿಯ ವಸ್ತ್ರವನ್ನು ಒಮ್ಮೆ ಉಟ್ಟ ಮೇಲೆ ಅದನ್ನು ಬಿಚ್ಚುವವರೆಗೆ ಮೈಲಿಗೆ. ಮಧ್ಯದಲ್ಲಿ ಅದನ್ನು ಬಿಚ್ಚಿದರೆ ಮತ್ತೆ ಉಟ್ಟರೆ ಮಡಿಯಾಗುವದಿಲ್ಲ.

ಕೆಲವರು ಮಧ್ಯದಲ್ಲಿ ಮಲಮೂತ್ರಗಳ ವಿಸರ್ಜನೆ ಮುಂತಾದವಕ್ಕಾಗಿ ಮಡಿಯ ವಸ್ತ್ರವನ್ನು ಬಿಚ್ಚಿಟ್ಟು, ಮೈಲಿಗೆಯ ವಸ್ತ್ರವುಟ್ಟು ಮತ್ತೆ ಬಂದು ಮಡಿಯ ವಸ್ತ್ರವುಟ್ಟು ಮಡಿ ಎನ್ನುತ್ತಾರೆ. ಸರ್ವಥಾ ಮಡಿಯಲ್ಲ. ತಪ್ಪು ಕ್ರಮ ಅದು.

## ರೇಶಿಮೆಯ ವಸ್ತ್ರ

ರೇಶಿಮೆಯ ವಸ್ತ್ರ ಸರ್ವಶ್ರೇಷ್ಠವಾದ ವಸ್ತ್ರ. ರೇಶಿಮೆಯ ಹುಳುವನ್ನು ಸಾಯಿಸಿ ತೆಗೆದ ವಸ್ತ್ರದ ಅದು ಹೇಗೆ ಶುದ್ಧ ಎಂಬ ಪ್ರಶ್ನೆ ಇವತ್ತಿನವರಿಗಿದೆ. ಸದಾಚಾರಸ್ಮೃತಿಯ ಅನುವಾದದ ಸಂದರ್ಭದಲ್ಲಿ ಇದಕ್ಕೆ ಪ್ರತ್ಯೇಕ ಲೇಖನ ಬರೆದು ಉತ್ತರ ನೀಡುತ್ತೇನೆ.

ರೇಶಿಮೆಯ ವಸ್ತ್ರವನ್ನುಟ್ಟು ದೇವರ ಪೂಜೆ ಮಾಡುವದಾದರೆ ಹತ್ತಿಯ ವಸ್ತ್ರದಂತೆ ಇದನ್ನೂ ಸ್ನಾನಕಾಲದಲ್ಲಿ ಮಡಿಮಾಡಿಕೊಂಡು ಒಣಗಿಸಿ ಉಟ್ಟು ಪೂಜೆ ಮಾಡಬೇಕು.

ಊಟಕ್ಕಾಗಿ ಬಳಸುವ ರೇಶಿಮೆಯ ವಸ್ತ್ರವನ್ನು ಪೂಜೆ ಜಪಗಳಿಗಾಗಿ ಬಳಸಬಾರದು.

ಜಪಕ್ಕೆ ಮತ್ತು ಊಟಕ್ಕೆ ಬಳಸುವ ರೇಶಿಮೆಯ ವಸ್ತ್ರವನ್ನು ಪ್ರತೀದಿವಸ ತೋಯಿಸಬೇಕಾಗಿಲ್ಲ. ಮೈಲಿಗೆಯ ಸ್ಪರ್ಶವಾಗದ ಸ್ಥಳದಲ್ಲಿ ರೇಶಿಮೆಯ ವಸ್ತ್ರವನ್ನಿಟ್ಟಿರಬೇಕು. ಜಪ/ಊಟದ ಸಮಯದಲ್ಲಿ ಅದನ್ನುಟ್ಟು ನಂತರ ಮತ್ತೆ ತೆಗೆದಿಡಬೇಕು.

ರೇಶಿಮೆಯ ವಸ್ತ್ರವನ್ನುಟ್ಟಾಗ ಬೇರೆಯ ಪದಾರ್ಥವನ್ನು ಮುಟ್ಟಿದರೆ ಮೈಲಿಗೆಯಾಗುವದಿಲ್ಲ. ಆದರೆ ಹಾಸಿಗೆ, ಚಪ್ಪಲಿ, ಶರ್ಟು ಪ್ಯಾಂಟು ಮುಂತಾದ ಪೂರ್ಣ ಮೈಲಿಗೆಯ ಪದಾರ್ಥಗಳನ್ನು ಮುಟ್ಟಬಾರದು.

ಅನೇಕರು ಹಾಗೆ ಮಾಡುತ್ತಾರೆ. ರೇಶಿಮೆಯ ವಸ್ತ್ರವುಟ್ಟು ಹಾಸಿಗೆಯ ಮೇಲೆ ಕೂಡುತ್ತಾರೆ. ಕಾರು ಬೈಕು ಓಡಿಸುತ್ತಾರೆ. ಆ ರೀತಿ ಮೈಲಿಗೆಯ ಸ್ಪರ್ಶವಾದ ಬಟ್ಟೆ ಮತ್ತೆ ಪೂಜೆ, ಜಪ, ಊಟದ ಮಡಿಗೆ ಬರುವದಿಲ್ಲ. ಬೇರೆ ಮೈಲಿಗೆಯ ಬಟ್ಟೆಗಳಂತೆ ಅದನ್ನು ಉಪಯೋಗಿಸಬೇಕು.

## ದಾಭಳಿ

ಧಾವಳಿ, ದಾಬಳಿ ಎಂದು ಕರೆಯಲ್ಪಡುವ ಈ ವಸ್ತ್ರ ಒಂದು ವಿಶಿಷ್ಟ ಕಂಬಳಿಯ ದಾರಗಳಿಂದ ಮಾಡಲ್ಪಟ್ಟಿರುತ್ತದೆ.

ರೇಶಿಮೆಯ ವಸ್ತ್ರಕ್ಕಿಂತ ಸ್ವಲ್ಪ ಹೆಚ್ಚಿನ ಮಡಿಯನ್ನಾಗಿ ಕೆಲವರು ಗ್ರಹಿಸುತ್ತಾರೆ.

### ನಾರು ಮಡಿ

ನಾರಿನಿಂದ ಮಡಿವಸ್ತ್ರಗಳನ್ನು ತಯಾರು ಮಾಡುತ್ತಾರೆ. ನಮ್ಮ ಋಷಿಮುನಿಗಳು ಧರಿಸುತ್ತಿದ್ದ ವಸ್ತ್ರ. ಕಲಿಯ ಈ ನಕಲೀಯುಗದಲ್ಲಿ ಇದರಲ್ಲಿಯೂ ನಕಲು ಆರಂಭವಾಗಿಬಿಟ್ಟಿದೆ.

**ರೇಶಿಮೆಯ ವಸ್ತ್ರಕ್ಕೆ ಅನ್ವಯಿಸುವ ನಿಯಮಗಳೆಲ್ಲ ನಾರುಮಡಿ ಮತ್ತು ದಾಬಳಿಗೂ ಅನ್ವಯಿಸುತ್ತವೆ.**

## ಮಡಿಗೆ ಬಾರದ ಬಟ್ಟೆಗಳು

ಕೆಳಗಿನ ವಿಷಯಗಳು  ಹತ್ತಿ/ರೇಶಿಮ/ದಾಬಳಿ ಮತ್ತು ನಾರು ವಸ್ತ್ರಗಳಿಗೆ ಅನ್ವಯಿಸುತ್ತವೆ.

### ಹರಿದಬಟ್ಟೆ

ಬಟ್ಟೆ ಹರಿದಿದ್ದರೆ ಮಡಿಗೆ ಬರುವದಿಲ್ಲ. ಗೃಹಸ್ಥರು ಹರಿದ ಬಟ್ಟೆಯನ್ನುಡಬಾರದು. ಸಂನ್ಯಾಸಿಗಳಿಗೆ ಮಾತ್ರ ಹರಿದ ಬಟ್ಟೆ ಮಡಿ. ಅವರಿಗೂ ಮಧ್ಯದಲ್ಲಿ ಹರಿದಿದ್ದರೆ ಮಡಿಗೆ ಬರುವದಿಲ್ಲ. ಕೌಪೀನಕ್ಕಾಗಿ ಹರಿಯುವದು ಬೇರೆ, ಮುಳ್ಳು ಮುಂತಾದವಗಳಿಂದ

ಹರಿಯುವದು ಬೇರೆ. ಆ ರೀತಿ ಹರಿದ ವಸ್ತ್ರಗಳು ಮಡಿಗೆ ಬರುವದಿಲ್ಲ.

ಇನ್ನು, ಬಡತನವಿದೆ, ನಮ್ಮ ಬಳಿ ಬೇರೆ ವಸ್ತ್ರವೇ ಇಲ್ಲ ಎಂದರೆ, ಸರ್ವಥಾ ಚಿಂತೆಯಿಲ್ಲ. ನಮ್ಮ ಮಟ್ಟಿಗೆ ಅದು ಮಡಿಯಾಗುತ್ತದೆ. ಹರಿದ ವಸ್ತ್ರವುಟ್ಟು ನಾವು ಮತ್ತೊಬ್ಬರ ಮಡಿಗೆ ತೊಂದರೆ ನೀಡಲು ಹೋಗಬಾರದು.

ದೇವರು ವಸ್ತ್ರಗಳನ್ನು ಕರುಣಿಸಿದ್ದರೂ ಹರಿದ ಬಟ್ಟೆಯುಟ್ಟು ಪೂಜೆ ಜಪ ಊಟಗಳನ್ನು ಮಾಡಬಾರದು ಎಂದು ತಾತ್ಪರ್ಯ.

## ಅಂಚಿಲ್ಲದ ಬಟ್ಟೆ

ಬಟ್ಟೆಗೆ ಅಂಚಿಲ್ಲದಿದ್ದರೆ ಮಡಿಗೆ ಬರುವದಿಲ್ಲ. ಅಂಚಿಲ್ಲದ ವಸ್ತ್ರವನ್ನುಟ್ಟು ಮಾಡುವ ಸತ್ಕರ್ಮ ಒಂದೇ, ಅದು ಅಪರಕರ್ಮ.  ಸಂನ್ಯಾಸಿಗಳಿಗೆ ಸಹ ಅಂಚಿಲ್ಲದ ಬಟ್ಟೆ ಮಡಿಗೆ ಬರುತ್ತದೆ. ಆದರೆ ಗೃಹಸ್ಥ ಬ್ರಹ್ಮಚಾರಿಗಳು ಅಂಚಿಲ್ಲದ ಬಟ್ಟೆಯನ್ನುಡು-ವಂತಿಲ್ಲ.

## ಹೊಲಿದ ಬಟ್ಟೆ

ಹೊಲಿದ ಬಟ್ಟೆಗಳು ಪೂಜೆಯ ಮಡಿಗೆ ಬರುವದಿಲ್ಲ. ಅಂದರೆ Shirt, pant ಮುಂತಾದವುಗಳು ಮಡಿಗೆ ಬರುವದಿಲ್ಲ. ಸೀರೆ ಪಂಚೆಗಳು ಮಾತ್ರ ಮಡಿಗೆ ಬರುವ ಬಟ್ಟೆಗಳು.

ಹೆಂಗಸರ ಕಂಚುಕಕ್ಕೆ (Blouse) ಶಾಸ್ತ್ರವೇ ವಿನಾಯಿತಿ ನೀಡಿದೆ. ಅವರು ಅವಶ್ಯವಾಗಿ ಕಂಚುಕವುಟ್ಟೇ ಅಡಿಗೆ ಮಾಡಬೇಕು. (ಇಲ್ಲಿಯೂ ಒಂದು ಬನ್ನಂಜೆಯ ದುರ್ವಾದವಿದೆ. ಹಿಂದಿನ ಕಾಲದಲ್ಲಿ ಹೆಂಗಸರು blouse ಧರಿಸುತ್ತಿರಲಿಲ್ಲ ಎನ್ನುವದು ಅವರ ವಿಚಿತ್ರ ದುರ್ವಾದ. ಅವರ ಶಿಷ್ಯರಾದ ಉಡುಪಿ ರಾಮನಾಥಾಚಾರ್ಯರೂ ಆ ದುರ್ವಾದವನ್ನು ಪ್ರಬಲವಾಗಿ ಖಂಡಿಸಿದ್ದಾರೆ, ಮಹಾಭಾರತದಲ್ಲಿ ಸ್ತ್ರೀಯರ ಕಂಚುಕದ ಕುರಿತು ಸ್ಪಷ್ಟ ಉಲ್ಲೇಖವಿದೆ, ಗಿರಿಜಾಕಲ್ಯಾಣದ ಉಪನ್ಯಾಸದಲ್ಲಿ [VNU053] ಪ್ರಮಾಣಗಳ ಸಮೇತ ಖಂಡಿಸಿದ್ದೇನೆ. ದ್ರೌಪದಿಯ ಮಾನರಕ್ಷಣೆಯ ಉಪನ್ಯಾಸವನ್ನು ಮಾಡುವಾಗ ಮತ್ತಷ್ಟು ಪ್ರಮಾಣಗಳೊಂದಿಗೆ ಖಂಡಿಸುತ್ತೇನೆ.)

## ಮಡಿಯ ಮಧ್ಯದಲ್ಲಿ ಮೈಲಿಗೆಯ ಕೆಲಸ ಬಂದಾಗ

ದೇವರ ಪೂಜೆ ಮುಗಿದ ಬಳಿಕ ಊಟಕ್ಕಾಗಿ ಸಾಕಷ್ಟು ಸಮಯವಿದ್ದರೆ ಮೈಲಿಗೆಯಲ್ಲಿನ ಕೆಲಸಗಳನ್ನು ಮುಗಿಸಿಕೊಳ್ಳಬೇಕು. ಆ ನಂತರ,Shirt, Pant ಮುಂತಾದವನ್ನು ತೆಗೆದು, ಮಡಿಪಂಚೆಯನ್ನುಟ್ಟು  ಕೈ ಕಾಲುಗಳನ್ನು ತೊಳೆದುಕೊಂಡು, ಶುದ್ಧವಾಗಿ ವರೆಸಿಕೊಂಡು, ಒಂದು ವಸ್ತ್ರವನ್ನು ಒದ್ದೆ ಮಾಡಿಕೊಂಡು ಅದನ್ನುಟ್ಟು ಭೋಜನಕ್ಕಾಗಿ ಒಣಗಿಸಿಕೊಂಡ ಮಡಿ ವಸ್ತ್ರವನ್ನುಟ್ಟು ಊಟ ಮಾಡಬೇಕು. ಕನಿಷ್ಠ ಪಕ್ಷ ರೇಶಿಮೆಯ ವಸ್ತ್ರವನ್ನಾದರೂ ಉಟ್ಟು ಊಟ ಮಾಡಬೇಕು. ಹೊಲಿದ ಬಟ್ಟೆಗಳನ್ನು ಹಾಕಿಕೊಂಡು, ಶೂ ಚಪ್ಪಲಿಗಳನ್ನು ಹಾಕಿಕೊಂಡು ಸರ್ವಥಾ ಊಟ ಮಾಡಬಾರದು.

ಸಾಮಾನ್ಯವಾಗಿ ಹೊರಗಿನ ಕೆಲಸಗಳಿಗೆ ಹೋಗಿ ಬಂದ ನಂತರ ಸ್ನಾನ ಮಾಡುವದು ಆರೋಗ್ಯ ಮತ್ತು ಧರ್ಮದ ದೃಷ್ಟಿಗಳಿಂದ ತುಂಬ ಒಳ್ಳೆಯದು. ಹೀಗಾಗಿ ಸಂಜೆ ಆಫೀಸಿನಿಂದ ತಿರುಗಿ ಬಂದ

ನಂತರ ಸ್ನಾನ ಮಾಡುವದು ಒಳಿತು. ಆದರೆ, ಕೆಲವು ಬಾರಿ ಸಾಧ್ಯವಾಗುವದಿಲ್ಲ.

ಹೀಗಾಗಿ, ಮನೆಗೆ ಬಂದು ಕೈಕಾಲು ತೊಳೆದು, ಬಟ್ಟೆಯನ್ನು ಬಿಚ್ಚಿ ಬೇರೆ  ಬಟ್ಟೆಯನ್ನುಟ್ಟು ತುಳಸೀವೃಂದಾವನಕ್ಕೆ ನಮಸ್ಕಾರ ಮಾಡಿ ತುಳಸೀಮೃತ್ತಿಕೆಯನ್ನು ಸ್ಪರ್ಶ ಮಾಡಬೇಕು. ನಂತರ ಮತ್ತೊಮ್ಮೆ ಕೈಕಾಲು ತೊಳೆದು ರೇಶಿಮೆಯ ವಸ್ತ್ರವನ್ನುಟ್ಟು ಸಂಧ್ಯಾವಂದನೆ ಊಟಗಳನ್ನು ಮಾಡತಕ್ಕದ್ದು.

ದೇವರ ಪೂಜೆಯನ್ನು ಮಾಡಬೇಕಾದರೆ ಮನೆಯವರ ಜೊತೆ ಮಾತನಾಡುವದೇ ಅಪರಾಧ. ಅಂತಹುದರಲ್ಲಿ ಫೋನಿನಲ್ಲಿ ಸರ್ವಥಾ ಮಾತನಾಡಬಾರದು.

ಹೋಮ ಹವನ ಪೂಜೆಗಳು ನಡೆಯಬೇಕಾದರೆ ಪುರೋಹಿತರು, ಅವರ ಸಂಗಡಿಗರು, ಯಜಮಾನ ಇವರೆಲ್ಲರೂ ಫೋನಿನಲ್ಲಿ ಮಾತನಾಡುವದು ನಮ್ಮ ಬ್ರಾಹ್ಮಣ ಸಮಾಜದ ವಿಕೃತ ಆಚರಣೆಗಳು.

ಶ್ರದ್ಧಾಳುಗಳಾದ ನೀವು ಮಾತ್ರ ಹಾಗೆ ಮಾಡಬೇಡಿ.

ವಸ್ತುತಃ ಮಡಿ ಎನ್ನುವದು ಓದಿನಿಂದ ಕಲಿಯುವಂತಹುದ್ದಲ್ಲ. ನೋಡಿ ಕಲಿಯುವಂತಹದು. ‘ಶಾಸ್ತ್ರ ಬಲ್ಲ ಮತ್ತು ಧರ್ಮದ ಬಗ್ಗೆ ಶ್ರದ್ಧೆಯುಳ್ಳ ಪಂಡಿತ’ರನ್ನು ಹತ್ತಿರದಿಂದ ಗಮನಿಸಿದರೆ ಸರಿಯಾದ ತಿಳುವಳಿಕೆ ಬರಲು ಸಾಧ್ಯ.

ನನ್ನ ಅನುಭವದ ನೆಲೆಗಟ್ಟಿನಲ್ಲಿ ಒಂದು ಮಾತನ್ನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ. ಮಡಿ ಮಾಡುತ್ತೇವೆ ಎಂದು ಹೇಳುವ ತುಂಬ ಜನ ಪಂಡಿತರು ಎಂದು ಕರೆಸಿಕೊಂಡವರಿಗೇ ಮಡಿ ಎನ್ನುವದರ ಸ್ಪಷ್ಟ ಪರಿಕಲ್ಪನೆ ಇಲ್ಲ. ಹೀಗಾಗಿ, ಇವರ ದಡ್ಡತನದ ಹಾರಾಟಗಳನ್ನು ನೋಡಿ ಮಡಿಯ ಬಗ್ಗೆ ತಾತ್ಸಾರ ತಾಳಬೇಡಿ. ಶಾಸ್ತ್ರದಲ್ಲಿ ಅದಕ್ಕೆ ಬಹಳ ಮಹತ್ತ್ವವನ್ನು ನೀಡಿದ್ದಾರೆ. ಒಂದು ಉದಾಹರಣೆ ನೀಡುತ್ತೇನೆ — **ಶ್ರಾದ್ಧದ ದಿವಸ ಹೊಸದಾದ, ಇನ್ನೂ ಉಡದ ಬಿಳಿ ಬಟ್ಟೆಯನ್ನು ಒದ್ದೆ ಮಾಡಿ ಅಂದೇ ಒಣಗಿಸಿ ಉಟ್ಟು ಶ್ರಾದ್ಧ**

**ಮಾಡಬೇಕು. ಒಮ್ಮೆ ಉಟ್ಟ ವಸ್ತ್ರ, ಹಿಂದಿನ ದಿವಸ ಒಣಹಾಕಿದ ವಸ್ತ್ರ ಯಾವುದೂ ಶ್ರಾದ್ಧದ ಮಡಿಗೆ ಬರುವದಿಲ್ಲ.**

ಇಂದು ಒಣಗಿಹಾಕಿದ ವಸ್ತ್ರ, ನಾಳೆ, ನಾಡಿದ್ದು, ಆಚೆ ನಾಡಿದ್ದು ಹೀಗೆ ಮೂರು ದಿವಸಗಳ ವರೆಗೆ ದೇವರ ಪೂಜೆಯ ಮಡಿಗೆ ಬರುತ್ತದೆ. ಆದರೆ ಆದರೆ ಶ್ರಾದ್ಧಕ್ಕೆ  ಮಾತ್ರ ಅಂದೇ ಒಣಗಿಸಿ ಉಡಬೇಕು.

ಹೀಗೆ ಮಡಿ ಎನ್ನುವ ಆಚರಣೆ ಇದ್ದೇ ಇದೆ. ಜ್ಯೋತಿಷ್ಯ ಎನ್ನುವ ಅದ್ಭುತ ಶಾಸ್ತ್ರ ಇವತ್ತು ಮಂಗಗಳ ಕೈಯಲ್ಲಿರುವ ಮಾಣಿಕ್ಯವಾಗಿದೆ ಎಂದ ಮಾತ್ರಕ್ಕೆ ಜ್ಯೋತಿಷ್ಯದ ಬೆಲೆ ಕಡಿಮೆಯಾಗುವದಿಲ್ಲ. ಹಾಗೆಯೇ, ಮಡಿಯನ್ನು ಸರಿಯಾಗಿ ಆಚರಿಸದೆ, ಶುಚಿತ್ವಕ್ಕೆ ಬೆಲೆ ಕೊಡದೆ ಮಡಿ ಮಾಡುವ ಜನರನ್ನು ಕಂಡು ನಿಮಗೆ ರೋಸಿಹೋಗಿರಬಹುದು, ಅದಕ್ಕೆ ಉತ್ತರ — ಮಡಿಯನ್ನು ಬಿಡುವದಲ್ಲ, ಶುದ್ಧವಾಗಿ ಮಡಿಯನ್ನು ಮಾಡಿ ಅವರಿಗೆ ಪಾಠ ಕಲಿಸುವದು. ಮಾಡಿ ಅದನ್ನು.

## ಸಂಗ್ರಹ

ದೇವರನ್ನು, ದೇವತೆಗಳನ್ನು, ವೇದಾದಿಶಾಸ್ತ್ರಗಳನ್ನು, ಗುರುಗಳನ್ನು ನಿಂದೆ ಮಾಡುವದರಿಂದ, ದ್ವೇಷ ಮಾಡುವದರಿಂದ ಉಂಟಾಗುವ ಮೈಲಿಗೆ ಅತ್ಯಂತ ನೀಚ ಮೈಲಿಗೆ. ಇದಕ್ಕೆ ಶುದ್ಧಿಯೇ ಇಲ್ಲ. ನಿಂದೆ ಮಾಡಿಸಿಕೊಂಡ ದೇವರು, ಗುರುಗಳು ತಾವಾಗಿ ಅನುಗ್ರಹ ಮಾಡಿದರೆ ಉಂಟು ಇಲ್ಲದಿದ್ದರೆ ಇಲ್ಲವೇ ಇಲ್ಲ.

ಕೊಲೆ, ಸುಲಿಗೆ, ಹಾದರ, ಸುಳ್ಳು ಮುಂತಾದ ಅಸತ್ಕರ್ಮಗಳನ್ನು ಮಾಡುವದರಿಂದ ಉಂಟಾಗುವ ಮೈಲಿಗೆ. ಇವಕ್ಕೆ ಪ್ರಾಯಶ್ಚಿತ್ತದಿಂದ ಮಾತ್ರ ಶುದ್ಧಿ. ಈ ಪಾತಕ ಮಾಡಿದವರು ಬ್ರಾಹ್ಮಣರೇ ಅಲ್ಲ. ಸಂಧ್ಯಾವಂದನೆಗೂ ಅನರ್ಹರು ಅವರು.

ಜನನ, ಮರಣ, ರಜಸ್ವಲಾದೋಷಗಳಿಂದ ಉಂಟಾಗುವ ಮೈಲಿಗೆ. ಇದಕ್ಕೆ ಕಾಲದಿಂದ ಶುದ್ಧಿ. ಆಯಾಯಾ ಕಾಲ ಮುಗಿದ ಮೇಲೆ ಗಂಡಸರು ಜನಿವಾರವನ್ನು ಬದಲಿಸಬೇಕು. ಮೈಲಿಗೆಯ ಕಾಲದಲ್ಲಿ ಅತ್ಯಂತ ಕನಿಷ್ಠ ಸತ್ಕರ್ಮಗಳಿರುತ್ತವೆ.

ಮಲಮೂತ್ರ ವಿಸರ್ಜನೆ, ವಾಂತಿಯಿಂದ ಉಂಟಾಗುವ ಮೈಲಿಗೆ. ಕೈ ಕಾಲು ತೊಳೆದು ಆಚಮನ ಮಾಡುವದರಿಂದ ಶುದ್ಧಿ.

ಸೀನು, ಆಕಳಿಕೆಯಿಂದ ಉಂಟಾಗುವ ಮೈಲಿಗೆ. ಬಲಗಿವಿಯನ್ನು ಸ್ಪರ್ಶ ಮಾಡುವದರಿಂದ ಶುದ್ಧಿ.

ಸಂಕಲ್ಪಪೂರ್ವಕವಾಗಿ ಮಂತ್ರ ಹೇಳುತ್ತ ಮಾಡುವದರಿಂದ ಮಡಿ.

ದೇವರ ಪೂಜೆಯನ್ನು ಮಾಡುವಾಗ ಇರಬೇಕಾದ ಶುದ್ಧಿ ಅದು ಸರ್ವಶ್ರೇಷ್ಠ ಮಡಿ.
ಶುದ್ಧವಾಗಿ ಒಣಹಾಕಿದ ವಸ್ತ್ರವನ್ನುಟ್ಟು ಆಚರಿಸಬೇಕಾದ ಮಡಿ.

ಜಪ, ಪಾರಾಯಣಗಳನ್ನು ಮಾಡಬೇಕಾದರೆ ಇರಬೇಕಾದ ಮಡಿ. ಸ್ನಾನ ಮಾಡಿದ ನಂತರ ರೇಶಿಮೆಯ ವಸ್ತ್ರ, ದಾಭಳಿಯನ್ನು ಉಟ್ಟು ಮಾಡಬೇಕಾದ ಮಡಿ.

ಮೂರನೆಯ ಹಂತದ್ದು ಭೋಜನದ ಮಡಿ. ಭೋಜನಕಾಲದಲ್ಲಿ ಉಟ್ಟ ರೇಶಿಮೆಯ ವಸ್ತ್ರವನ್ನು ಜಪಾದಿಗಳಿಗೆ ಬಳಸಬಾರದು.

ಶ್ರೀಹರಿಯ ಸ್ಮರಣೆಯಿಲ್ಲದಿದ್ದರೆ, ಕಾಮ ಕ್ರೋಧ ಲೋಭಾದಿಗಳಿಂದ ಮನಸ್ಸು ಮಲಿನವಾಗಿದ್ದರೆ, ಮತ್ತೊಬ್ಬರಿಗೆ ಹಿಂಸೆ ನೀಡುವ ಪ್ರವೃತ್ತಿಯವರಾಗಿದ್ದರೆ, ಯಾವ ರೇಶಿಮೆಯ ಬಟ್ಟೆಯುಟ್ಟರೂ ನಾವು ಮಡಿಯಾಗುವದಿಲ್ಲ.

ಮನಸ್ಸಿನ ಶುದ್ಧಿ ಪ್ರಧಾನ, ಅದಿದ್ದಾಗ ಮಾತ್ರ ದೇಹದ ಶುದ್ಧಿ. ಈ ಎರಡೂ ಶುದ್ಧಿಯನ್ನು ಗಳಿಸಿ ಶ್ರೀಹರಿಯನ್ನು ಆರಾಧಿಸಬೇಕು ಎಂಬ ಶ್ರೀ ವಿದ್ಯಾಧಿರಾಜತೀರ್ಥಗುರುಸಾರ್ವಭೌಮರ ಆದೇಶ ನಮ್ಮ ಮನಸ್ಸಿನಲ್ಲಿ ಸದಾ ಜಾಗೃತವಾಗಿರಬೇಕು.

— ವಿಷ್ಣುದಾಸ ನಾಗೇಂದ್ರಾಚಾರ್ಯ

<u>**ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ**</u>

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name VISHWANANDINI**
- **Account Number 35368588017**
- **Account Type Current Account**
- **Bank State Bank of India**
- **Branch T. Narasipura, Mysore**
- **IFSC SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**"ವಿಶ್ವನಂದಿನಿ ಗಮ್ಯ ತಲುಪಲಿ"**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, "Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491